ಸಿ) ಆರಕ್ಷಕ ಮಹಾನಿರ್ದೇಶಕರು, ತನಿಖೆ ವಿಭಾಗ ಕರ್ನಾಟಕ ರಾಜ್ಯ ಜಾಗ್ರತ ನಿಯೋಗ, ಬೆಂಗಳೂರು.

ರಾಜ್ಯ ಜಾಗ್ರತ ನಿಯೋಗದ ತನಿಖಾ ವಿಭಾಗದ ಎಲ್ಲ ಕಾರ್ಯಕಲಾಪಗಳು ಈ ಅಧಿಕಾರಿಯ ನೇತೃತ್ವದಲ್ಲಿರುತ್ತವೆ.

ಳ) ಆರಕ್ಷಕ ಮಹಾನಿರ್ದೇಶಕರು, (ವಿಶೇಷ ತುಕಡಿಗಳು) ಬೆಂಗಳೂರು.

ಅ) ಸಿ. ಒ. ಡಿ.
ಆ) ಎಫ್. ಎಸ್. ಎಲ್.
ಇ) ಫುಡ್ ಸೆಲ್
ಈ) ಫಾರೆಸ್ಟ ಸೆಲ್
ಉ) ಟ್ರೇನಿಂಗ್ ಮತ್ತು
ಊ) ಸಿ. ಆರ್. ಇ. ಸೆಲ್.

ಶಿಕಾರಿಪುರ ತಾಲ್ಲೂಕಿಗೆ ಪಡಿತರ ಕಾರ್ಯ ಮೂಲಕ ಹಂಚಿರುವ ಅಕ್ಕಿ ಪ್ರಮಾಣ

೧೯೧ (೧೫೬೬) ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಆಹಾರ ಹಾಗೂ ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಶಿಕಾರಿಪುರ ತಾಲ್ಲೂಕಿಗೆ ಏಪ್ರಿಲ್ ೮೫ ರಿಂದ ಜುಲೈ ೮೫ರವರೆಗೆ ಪಡಿತರ ಕಾರ್ಡು ಮೂಲಕ ಹಂಚಿರುವ ಅಕ್ಕಿ ಪ್ರಮಾಣ ಎಷ್ಟು ?

ಆ) ಹಳೆ ಅಕ್ಕಿ ಬದಲು ಹೊಸಅಕ್ಕಿ ವಿತರಣೆ ಆಗುತ್ತಿರುವುದಂ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ, ಸಂಬಂಧಪಟ್ಟವರ ವಿರುದ್ಧ ಕೈಗೊಂಡ ಕ್ರಮಗಳೇನು ?

ಶ್ರೀ ಬಿ. ಬಸವಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ೧,೧೦೦ ಕ್ವಿಂಟಾಲು
ಆ) ಇಲ್ಲ.
ಇ) ಉದ್ಭವಿಸುವುದಿಲ್ಲ.

ಮೈಸೂರಿನಲ್ಲಿರುವ ಇ. ಡಿ. ಆಸ್ಪತ್ರೆಯಲ್ಲಿ ಔಷಧಿಗಳ ಅಭಾವ

೧೯೨ (೧೫೬೬) ಶ್ರೀ ಎಂ. ಮಹದೇವ್ (ನಂಜನಗೂಡು).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಔಷಧಿಗಳ ಅಭಾವದಿಂದಾಗಿ ಮೈಸೂರಿನಲ್ಲಿರುವ ಇ. ಡಿ. ಆಸ್ಪತ್ರೆಯಲ್ಲಿನ ರೋಗಿಗಳು ತೊಂದರೆಗೊಳಗಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಬೇಕಾದ ಔಷಧಿಗಳನ್ನು ಸದರಿ ಆಸ್ಪತ್ರೆಗೆ ಒದಗಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು).—

ಅ) ಇಲ್ಲ.
ಆ) ಉದ್ಭವಿಸುವುದಿಲ್ಲ.